**ಅ. ದಾ. ಸಂ. : 376/2015**

**ಪಿ.ಡಬ್ಲ್ಯೂ : 01**

**<u>ದಿನಾಂಕ : 03-08-2021</u>** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u> :- 5 ನೇ ಪ್ರತಿವಾದಿ ಪರ ಶ್ರೀ. ವೈ.ಎಸ್. ಎಸ್. .** ವಕೀಲರಿಂದ :-

ದಾವಾ ಸ್ವತ್ತು ಎಷ್ಟು ಉದ್ದ ಮತ್ತು ಎಷ್ಟು ಅಗಲ ಇರುತ್ತದೆ ನನಗೆ ಹೇಳಲು ಬರುವುದಿಲ್ಲ. ಆದರೆ ಒಟ್ಟು 287 ಮತ್ತು 77 ಸ್ಕ್ವೇರ್ ಯಾರ್ಡ್ಸ್ ಇರುತ್ತದೆ ಎಂದು ನುಡಿಯುತ್ತಾರೆ. 287 ಸ್ಕ್ವೇರ್ ಯಾರ್ಡ್ಸ್ ಸದರಿ ಸ್ವತ್ತಿನ ನಂಬರ್ ಸಿ.ಟಿ.ಎಸ್. ನಂ 218 ಎ 1 ಎ 2 ಆಗಿರುತ್ತದೆ. 77 ಸ್ಕ್ವೇರ್ ಯಾರ್ಡ್ಸ್‌ನ ಸ್ವತ್ತಿನ ನಂ. ಸಿ.ಟಿ.ಎಸ್. ನಂ 218 ಎ 1 ಸಿ2 ಆಗಿರುತ್ತದೆ. ಸಿ.ಟಿ.ಎಸ್. ನಂ 218 ಎ 1 ಎ 2 ಸ್ವತ್ತಿನ ಚೆಕ್ಕು ಬಂದಿ ನನಗೆ ಗೊತ್ತಿರುತ್ತದೆ. ಸದರಿ ಸ್ವತ್ತಿನ ಪೂರ್ವಕ್ಕೆ ಪ್ಯಾಸೇಜ್, ಪಶ್ಚಿಮಕ್ಕೆ ಸುನೀಲ್ ತೆಂಗಿನಕಾಯಿ ಅವರ ಸ್ವತ್ತು, ಉತ್ತರಕ್ಕೆ ಹಸನ್ ಸಾಬ್ ದಾಸನಕೊಪ್ಪ ರಸ್ತೆ, ದಕ್ಷಿಣಕ್ಕೆ ವೆಂಕಟೇಶ್ವರ ಕಾಂಪ್ಲೆಕ್ಸ್ ಸಿ.ಟಿ.ಎಸ್. ನಂ 218 ಎ 1 ಎ 2 ರ ಯಾವ ದಿಕ್ಕಿಗೆ ಸಿ.ಟಿ.ಎಸ್. ನಂ 218 ಎ 1 ಸಿ2 ಬರುತ್ತದೆ ಎಂದರೆ ಸಾಕ್ಷಿ ಎರಡು ಸ್ವತ್ತು ಒಂದೇ ಬ್ಲಾಕಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಎರಡು ಸ್ವತ್ತುಗಳು ಒಂದೇ ಬ್ಲಾಕಿನಲ್ಲಿ ಬರುವ ಕಾರಣ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಎರಡು ಸ್ವತ್ತುಗಳ ಬಾಬ್ತು ಸಿಟಿ ಸರ್ವೆ ನಕಾಶೆ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನನ್ನ ಹಳೆ ಮಾಲೀಕರು ನನಗೆ ಅದನ್ನು ನೀಡಿದ್ದು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಇಲ್ಲವೋ ನನಗೆ ನೆನಪಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಧಾರವಾಡ.**